ಶ್ರೀ ಎಸ್. ಎಂ. ಶೀನ್ನಾಳಿ ಚಂದ್ರಶೇಖರ್,—ಮಾಡುತ್ತೇನೆ ಎಂದು ಹೇಳುತ್ತೀರಿ ಆದರೆ ಯಾವಾಗ ಮಾಡುತ್ತೇನೆ ಎಂದು ಹೇಳುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ವರದಿ ಬಂದ ನಂತರ ಸೂಕ್ತವಾದ ಕ್ರಮ ತೆಗೆದು ಕೊಳ್ಳುತ್ತೇನೆ,

Demands of the employees of the Karnataka State Khadi and Village Industries Board.

710 SRI G.K. TAKKED.—(Parasagad) Will the Minister for Small Scale Industries and Sericulture be pleased to state.—

(a) whether Government is aware of the several demands put forth by the employees of the Khadi and Village Industries Board in regard to the extension of service and pensionary benefits and other facilities to them on par with the Government employees ;

(b) whether it is not a fact that the Government had promised to look into the matter and to consider the demands sympathetically ;

(c) if so, the action taken by the Government so far in this regard ?

SMT. RENUKA RAJENDRAN (Minister for Small Scale Industries and Sericulture).—

(a) Yes.

(b) Yes.

(c) The demands of the employees for extension of benefit of pension and gratuity and other benfits as applicable to the employees of the State Government are under active consideration of the Government. Financial implication involved in this regard have been worked out and comparative study of the pensionary benefits both under the State Government and LIC Group Insurance Scheme is being examined for taking a decision.

ಶ್ರೀ ಜಿ.ಕೆ. ತಕ್ಕೇಡ್.—ಈ ಖಾದೀ ಬೋರ್ಡ್ ಹುಟ್ಟಿದಾಗಿನಿಂದಲೂ ಹಿಡಿದು ಇದುವರೆವಿಗೂ ಕರ್ನಾಟಕ ರಾಜ್ಯದಲ್ಲಿ ಖಾದೀ ಮತ್ತು ಗ್ರಾಮೋದ್ಯೋಗ ಮಂಡಳಿಯ ನೌಕರರಿಗೆ ನಿವೃತ್ತಿ ವೇತನ ಗ್ರಾಚುಟಿ ಮತ್ತು ಭತ್ಯ ಮತ್ತು ಇತರ ಸೌಲಭ್ಯಗಳು ಹಾಗೂ ಹರಿಜನಗಿರಿಜನರಿಗೆ ಕೊಡಬೇಕಾದಂತಹ ವಿಶೇಷಾತಿ ಇತ್ಯಾದಿಗಳನ್ನು ಒದಗಿಸುವ ಬಗ್ಗೆ ಭರವಸೆಯನ್ನು ಕೊಡುತ್ತೀರಾ ? ಇದುವರೆವಿಗೂ ಅವರಿಗೆ ಈ ಯಾವ ಸೌಲಭ್ಯವನ್ನು ಕೊಡದೆ ಇರುವುದಕ್ಕೆ ಕಾರಣವೇನು. ಎಷ್ಟು ದಿವಸಗಳಲ್ಲಿ ಕೊಡುತ್ತೀರಾ ?

† ಶ್ರೀಮತಿ ರೇಣುಕಾ ರಾಜೇಂದ್ರನ್.—ಮಾನ್ಯ ಸದಸ್ಯರು ಕೇಳಿದಂತಹ ಬೇಡಿಕೆಗಳು ಏನೇ ಆವುಗಳ ಬಗ್ಗೆ ಖಾದೀ ಹಾಗೂ ಗ್ರಾಮೀಣ ಕೈಗಾರಿಕೆಯ ಮಂಡಳಿಯ ನೌಕರರ ಯೂನಿಯನ್‌ರವರು ಕಳೆದ ವರ್ಷ ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದಿದ್ದರು. ಅವರು ಸುಮಾರು ೧೩ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದರು. ಆದರಲ್ಲಿ ನಾವು ೭ ಬೇಡಿಕೆಗಳನ್ನು ಪರಿಶೀಲನೆ ಮಾಡಿದ್ದೇವೆ. ಉಳಿದ ಬೇಡಿಕೆಗಳನ್ನು ಹಂತಹಂತವಾಗಿ ಪರಿಶೀಲನೆ ಮಾಡುವವರಿದ್ದೇವೆ. ಈಗ ಅದನ್ನೆಲ್ಲ ಲಿಸ್ಟ್ ಮಾಡಿ ಹೇಳುವುದಕ್ಕೆ ಆಗುವುದಿಲ್ಲ. ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ಪೆನ್‌ಷನ್ ಗ್ರಾಚುಟಿ ಇವುಗಳನ್ನು

ಆ ನೌಕರರಿಗೆ ಕೊಡಬೇಕೆಂದು ಮಾನ್ಯ ಸದಸ್ಯರು ಏನು ಒತ್ತಾಯ ಮಾಡುತ್ತಿದ್ದಾರೆ ಅದರ ಬಗ್ಗೆ ನಾವು ಈಗಾಗಲೇ ಗ್ರಾಚುಟಿಯನ್ನು ಕೊಟ್ಟಿದ್ದೇವೆ. ಪೆನ್‌ಷನ್ ಕೊಡುವುದು ಸರ್ಕಾರದ ಪರಿಶೀಲನೆಯಲ್ಲಿದೆ. ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇನ್ನು ಹರಿಜನಗಿರಿಜನರಿಗೆ ಪ್ರಮೋಷನ್ ಬಗ್ಗೆ ಪ್ರಾತಿನಿಧ್ಯವನ್ನು ಕೊಟ್ಟಿಲ್ಲ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಹೇಳುವುದಾದರೆ ಹಿಂದೆ ಇದ್ದಂತಹ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರುಗಳು ಅವರವರ ಜಾತಿಯವರಿಗೆ ಮಾತ್ರ ಪ್ರಮೋಶನ್ ಕೊಡುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದಾರೆ. ನ್ಯಾಯವಾಗಿ ಯಾರಿಗೆ ಪ್ರಮೋಶನ್ ಕೊಡಬೇಕಾಗಿತ್ತೂ ಅವರಿಗೆ ಕೊಟ್ಟಿಲ್ಲ. ಇಂಥಾದ್ದನ್ನು ಕಳೆದ ಒಂದು ವರ್ಷದಿಂದ ರೆಗ್ಯುಲರ್ ಆಗಿ ಯಾರಿಗೆ ನ್ಯಾಯವಾಗಿ ಪ್ರಮೋಷನ್ ಕೊಡಬೇಕೂ ಅವರಿಗೆಕೊಡಬೇಕೆಂದು ಸರ್ಕಾರ ಕ್ರಮ ತೆಗೆದು ಕೊಂಡಿದೆ. ಸರ್ಕಾರದ ಆಜ್ಞೆ ಪ್ರಕಾರ ಹರಿಜನಗಿರಿಜನರಿಗೆ ಇಷ್ಟು ಪರ್ಸೆಂಟ್ ಹಿಂದುಳಿದವರಿಗೆ ಇಷ್ಟು ಪರ್ಸೆಂಟ್ ಜನರಲ್ ಮೆರಿಟ್ ಪ್ರಕಾರ ಇಷ್ಟು ಪರ್ಸೆಂಟ್ ಪ್ರಮೋಶನ್ ಕೊಡಬೇಕೆಂದು ಸರ್ಕಾರ ಕ್ರಮ ಕೈಗೊಂಡಿದೆ.

ಶ್ರೀ ಜಿ.ಕೆ. ತಕ್ಕೇಡ್.—ಹೋದ ವರ್ಷ ನೌಕರ ಸಂಘದವರ ಬೇಡಿಕೆಗಳು ಈಡೇರಲಿಲ್ಲ ಎಂದು ಸಂಘದ ಕೆಲವು ನೌಕರರು ಸತ್ಯಾಗ್ರಹವನ್ನು ಕೈಗೊಂಡರು ಹೀಗಿರುವಾಗ ಕಾನೂನು ಬದ್ಧವಾಗಿ ಯಾವುದೇ ನೋಟೀಸನ್ನು ಕಾರ್ಯದರ್ಶಿಯವರು ನೌಕರರಿಗೆ ಕೊಡದೆ ಸುಮಾರು ೧೩–೧೮ ಜನರನ್ನು ಸಸ್ಪೆಂಡ್ ಮಾಡಿದ್ದಾರೆ. ಸುಮಾರು ೨೦೦ ಜನ ನೌಕರರನ್ನು ಬೇರೆ ಕಡೆಗೆ ವರ್ಗ ಮಾಡಿದ್ದಾರೆ. ನಂತರ ಆ ಕಾರ್ಯದರ್ಶಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಯಾವ ನೌಕರರನ್ನು ಸಸ್ಪಂಡ್ ಮಾಡಿದ್ದಾರೆ ಅವರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ ಎಂದು ಅವರು ಹೇಳುತ್ತಿದ್ದಾರೆ. ಆದರೆ ನೌಕರರು ಸ್ವಲ್ಪ ಶಿಸ್ತಿನಿಂದ ಕೆಲಸ ಮಾಡಿಕೊಂಡು ಹೋಗಬೇಕಾಗುತ್ತದೆ. ಸಾಲವನ್ನು ಮಂಜೂರು ಮಾಡುವ ಅರ್ಜಿಗಳಿಗೆ ಸಂಬಂಧಪಟ್ಟ ಹಾಗೆ ಕೆಲವು ಲೋಪದೋಷಗಳನ್ನು ಮಾಡಿದ್ದಾರೆ. ಸರ್ವೆ ಪ್ರಾಜೆಕ್ಟ್ ರಿಪೋರ್ಟ್ ಮತ್ತು ಲೋನ್ ಪ್ರಾಜೆಕ್ಟ್ ಇವುಗಳನ್ನು ತಯಾರು ಮಾಡುವಾಗ ಫಾಲ್ಸ್ ರಿಪೋರ್ಟನ್ನು ತಯಾರು ಮಾಡಿದ್ದಾರೆ ಎಂದು ನನ್ನ ಮುಂದೆ ಇರುವ ವರದಿ ಹೇಳುತ್ತದೆ. ಇವರ ಬಗ್ಗೆ ಸರ್ಕಾರದವರು ಸಹಾನು ಭೂತಿಯಿಂದ ಚರ್ಚೆ ಮಾಡಿ ತಪ್ಪಿತಸ್ಥರು ಅಲ್ಲ ಎಂದು ಕಂಡುಬಂದರೆ ಪುನಃ ಅವರನ್ನು ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ.ಕೆ. ತಕ್ಕೇಡ್.—ಈಗ ನೌಕರರು ಯಾರು ಯಾರನ್ನು ಸಸ್‌ಪೆನ್‌ಷನ್‌ನಲ್ಲಿ ಇಟ್ಟಿದ್ದಾರೆಯೋ ಅವರಿಗೆ ಎಲ್ಲರಿಗೂ ಬಹಳ ತೊಂದರೆಯಾಗಿದೆ. ಆದ್ದರಿಂದ ಇವರ ವಿಷಯವನ್ನು ಪುನರ್ ಪರಿಶೀಲನೆ ಮಾಡಿ ಇವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ತಮ್ಮ ಎಲ್ಲಾ ಗೊತ್ತಿರುವ ಹಾಗೆ ೨ ತಿಂಗಳಿಂದ ಕೇಂದ್ರ ಸರ್ಕಾರದ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ಮುಷ್ಕರ ನಡೆಸುತ್ತಿದ್ದಾರೆ ಇದರಿಂದಾಗ ಉತ್ಪನ್ನ ಯಾವ ರೀತಿ ನಷ್ಟವಾಗಿದೆ ಎಂಬುದು ತಮಗೆ ಗೊತ್ತಿದೆ. ಖಾದೀ ಬೋರ್ಡ್‌ನಲ್ಲಿ ಈ ಒಂದು ವರ್ಷದಿಂದ ಆಕ್ಟಿವಿಟೀಸ್‌ಗಳು ಯಾವ ರೀತಿ ನಡೆಯಂತ್ತಿವೆ ಎಂಬುದು ತಮಗೆಲ್ಲರಿಗೂ ಗೊತ್ತಿದೆ. ಇದರ ಬಗ್ಗೆ ಅನೇಕರಿಂದ ಟೀಕೆಗಳು ಬಂತು. ಅಲ್ಲಿ ಸರಿಯಾಗಿ ಕೆಲಸ ನಡೆಯುತ್ತಾ ಇರಲಿಲ್ಲ ಅದಕೋಸ್ಕರ ಕೆಲವು ನೌಕರರನ್ನು ಸಸ್‌ಪೆನ್‌ಷನ್‌ನಲ್ಲಿ ಇಡ ಬೇಕಾಗಿ ಬಂತು. ಅವರು ಚೆನ್ನಾಗಿ ನಡೆದುಕೊಂಡರೆ ಅದನ್ನು ಪರಿಶೀಲನೆ ಮಾಡಿ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.—ಪ್ರಶ್ನೆ ನಂ. ೧೪೪ (೨೮೬) ಮಾನ್ಯ ಸದಸ್ಯರು ಗೈರು ಹಾಜರಿಯಾಗಿದ್ದಾರೆ.